# ‘ಅಮ್ಮನ ಮನೆ’ಯಲ್ಲಿ, ಮಡಿಲಲ್ಲಿ..

**ನಿಖಿಲ್ ಮಂಜೂ ನಿರ್ದೇಶನದ ‘ಅಮ್ಮನ ಮನೆ’ ಸಿನಿಮಾ ರಾಘವೇಂದ್ರ ರಾಜ್‌ಕುಮಾರ್ ಅವರಿಗೆ ಅಮ್ಮನ ಮಡಿಲಾಗಿ ಪರಿಣಮಿಸಿದೆ.**

■ ರಘು

‘ನಾನೊಂದು ಬಿಳಿ ಹಾಳೆ’ ಎಂದರು ರಾಘವೇಂದ್ರ ರಾಜ್‌ಕುಮಾರ್. ‘ಜನರನ್ನು ತಲುಪುವ ನಿಟ್ಟಿನಲ್ಲಿ ನನಗಿದು ಭಿನ್ನ ಅನುಭವ’ ಎಂದರು ನಿರ್ದೇಶಕ ನಿಖಿಲ್ ಮಂಜೂ ಲಿಂಗಯ್ಯ. ಇಬ್ಬರೂ ಮಾತನಾಡುತ್ತಿದ್ದುದು ‘ಅಮ್ಮನ ಮನೆ’ ಚಿತ್ರದ ಬಗ್ಗೆ. ಇಬ್ಬರ ಮಾತಿನಲ್ಲೂ ಇದ್ದುದು ಒಂದೇ ಧ್ವನಿ – ‘ಈ ಸಿನಿಮಾ ನಮ್ಮ ಪಾಲಿಗೊಂದು ಹೊಸ ಹಾಗೂ ಆಪ್ತ ಅನುಭವ’.

ಕಳೆದ ವಾರ ಮುಹೂರ್ತ ನಡೆಸಿದ ‘ಅಮ್ಮನ ಮನೆ’ ಸಿನಿಮಾ ನಾಯಕ–ನಿರ್ದೇಶಕ ಇಬ್ಬರಿಗೂ ಬೇರೆ ಬೇರೆ ಕಾರಣದಿಂದ ಮುಖ್ಯವೆನ್ನಿಸಿದೆ. ಸುಮಾರು ಒಂದೂವರೆ ದಶಕದ ನಂತರ ರಾಘಣ್ಣ ಬಣ್ಣ ಹಚ್ಚಿರುವ ದೃಶ್ಯವಿದು. ಜನಪ್ರಿಯತೆಯ ಉತ್ತುಂಗದ ಸಮಯದಲ್ಲಿಯೇ ಒಂದೊಂದಾಗಿ ಹೆಗಲೇರಿದ ಕೌಟುಂಬಿಕ ಜವಾಬ್ದಾರಿಗಳಿಂದಾಗಿ ಅವರು ಕ್ಯಾಮೆರಾದ ಹಿಂದೆ ಸರಿಯಬೇಕಾಯಿತು. ಅದರ ಜೊತೆಗೆ, ಆರು ವರ್ಷಗಳ ಹಿಂದೆ ಪಾರ್ಶ್ವವಾಯುವಿಗೆ ತುತ್ತಾಗಿದ್ದು ಕೂಡ ಅವರು ತೆರೆಮರೆಗೆ ಸರಿಯುವಂತೆ ಮಾಡಿತ್ತು. ಕಷ್ಟದ ದಿನಗಳನ್ನು ದಾಟಿ ಬಂದಿರುವ ಅವರು – ‘ಅಮ್ಮನ ಮನೆ’ ಮೂಲಕ ಮತ್ತೆ ಚಿತ್ರರಂಗಕ್ಕೆ ಬಂದಿದ್ದಾರೆ.





ಕನ್ನಡ ಚಿತ್ರರಂಗವನ್ನು ಕುಟುಂಬದಂತೆ ಕಂಡವರು ರಾಜ್‌ಕುಮಾರ್. ರಾಘವೇಂದ್ರರ ಪಾಲಿಗೆ ಸಿನಿಮಾದಲ್ಲಿ ನಟಿಸುವುದು ಕುಟುಂಬದೊಂದಿಗೆ ಒಡನಾಡಿದ ಅನುಭವವನ್ನೇ ನೀಡುತ್ತಿದೆ. ಅಷ್ಟು ಮಾತ್ರವಲ್ಲ – ಕುಟುಂಬದ ಒತ್ತಡದ ಕಾರಣಗಳಿಂದ ತಮ್ಮ ಪುತ್ರ ನಟನೆಯಿಂದ ದೂರ ಉಳಿಯಬೇಕಾಗಿ ಬಂದುದು ಪಾರ್ವತಮ್ಮನವರ ನೋವಿಗೆ ಕಾರಣವಾಗಿತ್ತಂತೆ. ಈಗ ಚಿತ್ರದಲ್ಲಿ ನಟಿಸುತ್ತಿರುವುದು ಅಮ್ಮನ ಆಶಯವನ್ನು ಈಡೇರಿಸುವ ಮಾರ್ಗವೆಂದೂ ರಾಘವೇಂದ್ರರಿಗೆ ಅನ್ನಿಸಿದೆ.

‘ಹಳೆಯದೆಲ್ಲ ಮರೆತುಹೋಗಿದೆ. ನಿರ್ದೇಶಕರು ತಮ್ಮ ಕಥೆಯಲ್ಲಿ ನನ್ನನ್ನು ಕಂಡಿದ್ದಾರೆ. ಈಗ ಅವರು ತಂದೆಯ ರೂಪದಲ್ಲಿ ನನ್ನನ್ನು ಪೊರೆಯಬೇಕು. ನಾನು ಸಂಪೂರ್ಣವಾಗಿ ಅವರಿಗೆ ಒಪ್ಪಿಸಿಕೊಳ್ಳುವೆ’ ಎಂದು ವಿನಯವೇ ಮೂರ್ತಿವೆತ್ತಂತೆ ರಾಘಣ್ಣ ಹೇಳುವಾಗ, ಪಕ್ಕದಲ್ಲಿ ಕೂತಿದ್ದ ನಿಖಿಲ್ ಅವರ ಕಣ್ಣುಗಳಲ್ಲೂ ನೀರಿನ ಪಸೆಯಾಡಿದಂತಿತ್ತು.

‘ನಿರ್ದೇಶಕರನ್ನು ಒಪ್ಪಿಸುವುದು ನನ್ನ ಕೆಲಸ. ಜನರನ್ನು ಒಪ್ಪಿಸುವುದು ನಿರ್ದೇಶಕರ ಕೆಲಸ’ ಎಂದು ಸ್ಪಷ್ಟವಾಗಿ ಹೇಳಿದ ರಾಘಣ್ಣ, ‘ಅಮ್ಮನ ಮನೆ’ ಚಿತ್ರದ ಮೂಲಕ ತಮ್ಮೊಳಗಿನ ಕಲಾವಿದನನ್ನು ಮತ್ತೆ ಕಂಡುಕೊಳ್ಳುವ ಪ್ರಯತ್ನದಲ್ಲಿದ್ದಾರೆ. ನಿರ್ದೇಶಕ ಮಂಜು ಅವರದು ಬೇರೆಯದೇ ಬಗೆಯ ಹುಡುಕಾಟ. ಈವರೆಗೆ ಪರ್ಯಾಯ ಚಿತ್ರಗಳ ಮೂಲಕ ಗುರ್ತಿಸಿಕೊಂಡಿರುವ ಅವರು, ಇದೇ ಮೊದಲ ಬಾರಿ ಪೂರ್ಣ ಪ್ರಮಾಣದ ವ್ಯಾಪಾರಿ ಚಿತ್ರ ನಿರ್ದೇಶಿಸುತ್ತಿದ್ದಾರೆ.

‘ಈವರೆಗೆ ಚಿತ್ರೋತ್ಸವಗಳನ್ನು ಹಾಗೂ ಪ್ರಶಸ್ತಿಗಳನ್ನು ಗಮನದಲ್ಲಿಟ್ಟುಕೊಂಡು ಸಿನಿಮಾ ನಿರ್ದೇಶಿಸಿದ್ದೇನೆ. ಇದೇ ಮೊದಲ ಬಾರಿಗೆ ಮುಖ್ಯವಾಹಿನಿಯ ನಾಯಕನ ಜೊತೆಗೆ ಸಿನಿಮಾ ಮಾಡುತ್ತಿರುವೆ. ಪ್ರೇಕ್ಷಕರನ್ನು ಗಮನದಲ್ಲಿಟ್ಟುಕೊಂಡು ಈ ಸಿನಿಮಾ ಮಾಡುತ್ತಿರುವೆ’ ಎನ್ನುವ ನಿಖಿಲ್‌ರ ಮಾತುಗಳಲ್ಲಿ, ಹೊಸ ಪಯಣಕ್ಕೆ ಸಿದ್ಧವಾಗಿರುವ ಉತ್ಸಾಹವಿತ್ತು.

‘ಅಮ್ಮನ ಮನೆ’ ಚಿತ್ರದಲ್ಲಿ ರಾಘವೇಂದ್ರರದು ದೈಹಿಕ ಶಿಕ್ಷಕನ ಪಾತ್ರ. ಸದ್ಯಕ್ಕೆ ದೈಹಿಕ ದಣಿವಿನಿಂದ ಬಳಲುತ್ತಿರುವ ಅವರಿಗೆ ದೇಹದಾರ್ಢ್ಯದ ಬಗ್ಗೆ ಬೋಧಿಸುವ ಶಿಕ್ಷಕನ ಪಾತ್ರದಲ್ಲಿ ನಟಿಸುವುದು ಸವಾಲೆನ್ನಿಸಿದೆ. ‘ನೋಡುತ್ತಿರಿ, ಸಿನಿಮಾ ಮುಗಿಯುವ ವೇಳೆಗೆ ರಾಘಣ್ಣ ತಮ್ಮ ಯೌವನದ ದಿನಗಳಿಗೆ ಮರಳಿರುತ್ತಾರೆ’ ಎಂದರು ನಿಖಿಲ್.

ಚಿತ್ರದ ಮುಹೂರ್ತದ ಸಂದರ್ಭದಲ್ಲಿ ಶಿವರಾಜ್‌ಕುಮಾರ್ ಹಾಗೂ ಪುನೀತ್ ರಾಜ್‌ಕುಮಾರ್ ಕುಟುಂಬ ಸಮೇತರಾಗಿ ಬಂದು ಶುಭಕೋರಿದ್ದು ಕೂಡ ‘ಅಮ್ಮನ ಮನೆ’ಯ ವಾತಾವರಣವನ್ನೇ ಸೂಚಿಸುವಂತಿತ್ತು. ಹಾಂ, ಅಮ್ಮನ ಪಾತ್ರದಲ್ಲಿ ಬಿ. ಜಯಶ್ರೀ ನಟಿಸುತ್ತಿದ್ದಾರೆ. ■